**ಓ.ಎಸ್. ಸಂಖ್ಯೆಃ 3/2015**

**ಡಿ.ಡಬ್ಲ್ಯೂಃ 1**

ದಿನಾಂಕಃ 31.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಯ ಪರ ವಕೀಲರಿಂದ**

1. ನನ್ನ ಸ್ವಂತ ಊರು ರಾರಾವಿ. ವಾದಿಗಳು ರಾರಾವಿ ಗ್ರಾಮದವರು. ವಾದಿಗಳಿಗೆ ರಾರಾವಿ ಗ್ರಾಮದಲ್ಲಿ ಭೂಮಿಗಳು ಇರುವ ವಿಚಾರ ನನಗೆ ಗೊತ್ತಿದ್ದೆ. ದಾವಾ ಆಸ್ತಿಗಳು ವಾದಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ನಮ್ಮ ಜಮೀನಿನ ಪಕ್ಕದಲ್ಲಿ ವಾದಿಗಳಿಗೆ ಜಮೀನು ಇದೆ ಎಂದರೆ ಸರಿಯಲ್ಲ. ವಾದಿಗಳು ತಮ್ಮ ಜಮೀನಿಗೆ ನನ್ನ ಜಮೀನಿನ ಮೂಲಕ ಹಾದುಹೋಗಬೇಕು ಎಂದರೆ ಸರಿಯಲ್ಲ. ಸರ್ವೆ ನಂ 44 ಕ್ಷೇತ್ರ 90 ಸೆಂಟ್ಸ ಜಮೀನು ನನ್ನದ್ದು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೆನೆ. ಸದರಿ ಜಮೀನು ನನ್ನ ಹಿರಿಯರಿಗೆ ಸೇರಿದ್ದು. ಆ ಬಗ್ಗೆ ಯಾವುದೇ ನೋಂದಾಯಿತ ದಾಖಲೆ ಇರುವುದಿಲ್ಲ. ಸರ್ವೆ ನಂ 44 ರಲ್ಲಿನ 90 ಸೆಂಟ್ಸ ಜಮೀನು ಪ್ರತಿವಾದಿ ನಂ 1 ಮತ್ತು 2 ರವರ ತಂದೆಗೆ ಸೇರಿದ್ದು ಸರಿಯಲ್ಲ. ವಾದಿಗಳು ಚಿಕ್ಕವರಿದ್ದಾಗ ಅವರ ತಾಯಿ ಸದರಿ ಜಮೀನನ್ನು ಕೊಂಡುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನು ವಾದಿಗಳಿಗೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ. ನನ್ನದು 20 ಎಕರೆ ಜಮೀನು ಇದ್ದು ಅದರ ಹಕ್ಕು ಬದಲಾವಣೆ ಮಾಡಿಸಿಕೊಳ್ಳುವ ಸಮಯದಲ್ಲಿ ಸರ್ವೆ ನಂ 44 ರ ಜಮೀನು ಸಹ ಕಾನೂನು ಬಾಹಿರವಾಗಿ ಸೇರಿಸಿದ್ದೆನೆ ಎಂದರೆ ಸರಿಯಲ್ಲ. ಸದರಿ 90 ಸೆಂಟ್ಸ ಜಮೀನು ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಜಮೀನು ವಾದಿ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ನಮ್ಮ 20 ಎಕರೆ ಜಮೀನನ್ನು ಸರ್ವೆ ಮಾಡಿಸುವಾಗ ಸರ್ವೆ ನಂ 44 ಜಮೀನು ವಾದಿಗಳ ಹೆಸರಿಗೆ ಇರುವುದು ಗೊತ್ತಾಯಿತು ಎಂದರೆ ಸರಿ. ಆಗ ನಾನು ಈ ದಾವೆಯನ್ನು ಮರುವಿಚಾರಣೆಗೆ ಒಳಪಡಿಸಲು ಅರ್ಜಿ ಸಲ್ಲಿಸಿದೆ ಎಂದರೆ ಸರಿ. ಸರ್ವೆ ನಂ 44 ಜಮೀನು ನಮಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 44 ರ ಪಕ್ಕ ಸರ್ವೆ ನಂ 46 ಇದೆ ಎಂದರೆ ಸರಿಯಲ್ಲ.

**ಓ.ಎಸ್. ಸಂಖ್ಯೆ: 3/2015**

**ಡಿ.ಡಬ್ಲ್ಯೂ: 1**

ವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 44 ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**